**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ</u>**

**<u>ದಿನಾಂಕ 16-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ BS ಪ್ರತಿವಾದಿ ಪರ ವಕೀಲರಿಂದ</u>**

ನನ್ನ ತಂದೆ 2013 ರಲ್ಲಿ ಮೃತಪಟ್ಟಿರುತ್ತಾರೆ ಆದರೆ ದಿನಾಂಕ ಹೇಳಲು ಬರುವುದಿಲ್ಲ. ನನ್ನ ತಂದೆ ನಿವೃತ್ತಿ ಆಗುವ ಪೂರ್ವದಲ್ಲಿ ಮೃತಪಟ್ಟಿರುತ್ತಾರೆ. ಪ್ಲಾಟ್ ನಂ.54 ಮೊದಲು ಯಾರಿಗೆ ಸೇರಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಪ್ಲಾಟ್ ನಂ.54 ನ್ನು ವೆಂಕಟೇಶ ಇವರಿಂದ ಖರೀದಿ ಮಾಡಿರುತ್ತಾರೆ ಆದರೆ ದಿನಾಂಕ ಹೇಳಲು ಬರುವುದಿಲ್ಲ. ವೆಂಕಟೇಶನ ತಂದೆ ಹೆಸರು ಗೊತ್ತಿಲ್ಲ. ಸದರಿ ಪ್ಲಾಟನ್ನು 5 ಲಕ್ಷ 25 ಸಾವಿರಕ್ಕೆ ಖರೀದಿ ಮಾಡಿರುತ್ತಾರೆ ಆದರೆ ಖರೀದಿ ಆದ ದಿನಾಂಕ ಹೇಳಲು ಬರುವುದಿಲ್ಲ. ಪ್ಲಾಟ್ ಖರೀದಿ ಪತ್ರ ಆಗುವ

ಸಮಯದಲ್ಲಿ ನಾನು, ನನ್ನ ಚಿಕ್ಕಪ್ಪ ಸೋಮಣ್ಣ ಮತ್ತು ನನ್ನ ತಮ್ಮ ಹಾಜರು ಇದ್ದೇವು. ಖರೀದಿ ಪತ್ರಕ್ಕೆ ಸಾಕ್ಷಿಯಾಗಿ ಸೋಮಣ್ಣ ಸಹಿ ಮಾಡಿರುತ್ತಾರೆ ಮತ್ತೆ ಯಾರು ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಪ್ಲಾಟನ್ನು ನನ್ನ ತಂದೆ ವೆಂಕಟೇಶ ಇವರಿಂದ 5 ಲಕ್ಷ 25 ಸಾವಿರಕ್ಕೆ ಖರೀದಿ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ತಂದೆ ಮೃತಪಟ್ಟ ನಂತರ ನಾನು, ನನ್ನ ತಮ್ಮ ಮತ್ತು ನನ್ನ ಚಿಕ್ಕಪ್ಪ ಸೋಮಣ್ಣ ಸೇರಿ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪ್ಲಾಟನ್ನು ನಾನು, ನನ್ನ ತಮ್ಮ ಮತ್ತು ನನ್ನ ಚಿಕ್ಕಪ್ಪ ಸೋಮಣ್ಣ ಸೇರಿ ಖರೀದಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ಲಾಟು ಮೊದಲು ವೆಂಕಟೇಶನಿಗೆ ಸೇರಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಮತ್ತು ಅದನ್ನು ವೆಂಕಟೇಶನಿಂದ ಖರೀದಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಸಮಯದಲ್ಲಿ ಸೋಮಣ್ಣ ಹಾಜರು ಇದ್ದು ಆತ ಸಾಕ್ಷಿಯಾಗಿ ಸಹಿ ಮಾಡಿರುತ್ತಾನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ಲಾಟ ನಂ.54 ಇದರ ಮೂಲ ಮಾಲೀಕ ಸೋಮಶೇಖರ ಉರ್ಫ ಸೋಮನಾಥ ತಂದೆ ಎಸ್.ಬೂದೆಪ್ಪ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ಲಾಟನ್ನು 4ನೇ ಪ್ರತಿವಾದಿ ಮಂಜುನಾಥ ಇವರು ರೆಡ್ಡಿ ಯಾದವ್ ಕೊತ್ತದೊಡ್ಡಿ ಇವರಿಂದ 2 ಲಕ್ಷ ಸಾಲ ಪಡೆದು ಸದರಿ ಹಣದಿಂದ ಸದರಿ ಸ್ವತ್ತನ್ನು ಸೋಮನಾಥನಿಂದ ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಿನಾಂಕ 09.07.2014 ರಂದು ಸೋಮನಾಥ ಮಂಜುನಾಥ ಹೆಸರಿಗೆ ಪ್ಲಾಟ್ 54 ನ್ನು ಖರೀದಿಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕೆ ರಾಘವೇಂದ್ರ ಮತ್ತು ಜೆ.ಶಿವಕುಮಾರ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ಲಾಟ 54 ಕ್ಕೆ ನಾನು ಸಂಬಂಧ ಇಲ್ಲದೇ ಇರುವುದರಿಂದ ಸದರಿ ಪ್ಲಾಟನ್ನು ಯಾರಿಂದ ಯಾರು ಎಷ್ಟಕ್ಕೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಪ್ಲಾಟಿನಲ್ಲಿ ಮಂಜುನಾಥ ವಿರುಪಾಕ್ಷೆಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಶಾಖೆ ಗಬ್ಬೂರು ಬಾಂಕಿನಲ್ಲಿ 5 ಲಕ್ಷ ಸಾಲ ಪಡೆದು ಮನೆ ಕಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಪ್ಲಾಟಿನಲ್ಲಿ ಇದ್ದ ಮನೆ 4ನೇ ಪ್ರತಿವಾದಿಯ ಸ್ವಯಾರ್ಜಿತ ಮನೆ ಆಗಿರುತ್ತದೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ ಮಂಜುನಾಥ ಮನೆ ಕಟ್ಟಲು ಪಡೆದ ಸಾಲವನ್ನು ಇಲ್ಲಿವರೆಗೆ ಮರುಪಾವತಿ ಮಾಡುತ್ತಿದ್ದಾನೆ ಎಂಬ ಪ್ರಶ್ನೆಯನ್ನು ಸಾಕ್ಷಿಗೆ ಕೇಳಿದಾಗ ನ್ಯಾಯಾಲಯದ ಸದರಿ ಪ್ರಶ್ನೆಯನ್ನು ಸಾಕ್ಷಿಗೆ ಕೇಳಲು ಬರುವುದಿಲ್ಲ ಎಂದು ನ್ಯಾಯಾಲಯವು ತಳ್ಳಿ ಹಾಕಿರುತ್ತದೆ.

ನಾನು ಮತ್ತು ಇತರೇ ಪ್ರತಿವಾದಿಗಳು ಪ್ಲಾಟ್ ನಂ. 54 ಕ್ಕೆ ಯಾವುದೇ ಸಂಬಂಧ ಇರುವುದಿಲ್ಲ, ಮಾಲೀಕರು ಆಗಿರುವುದಿಲ್ಲ ಹಾಗೂ ಕಬ್ಜೆದಾರರು ಇರುವುದಿಲ್ಲ ಮತ್ತು ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವ ಜಮೀನುಗಳಲ್ಲಿ ಸ.ನಂ.448/1 ರಲ್ಲಿ 7 ಎಕರೆ 26 ಗುಂಟೆಯಲ್ಲಿ 1 ಎಕರೆ 22 ಗುಂಟೆ ಮಾತ್ರ ನಮ್ಮ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ಪ್ಲಾಟ್ ನಂ.54 ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಇದ್ದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.